**ಸಾಕ್ಷಿಗೆ ದಿನಾಂಕ 09.06.2026 ರಂದು ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ:**

ನಾನು ಜಾಲಪ್ಪ ಕಾಲೇಜಿನಲ್ಲಿ ಕ್ಲರ್ಕ್ ಆಗಿ ಸುಮಾರು 26 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಅದು ಖಾಸಗಿ ಕಾಲೇಜ್ ಆಗಿರುತ್ತದೆ. 2016-17 ರಲ್ಲಿ 15 ರಿಂದ 20 ಸಾವಿರ ರೂ. ವರೆಗೂ ಸಂಬಳ ಬರುತ್ತಿತ್ತು. ಆರೋಪಿ 2015-16 ರಿಂದ ಪರಿಚಯ. ಆರೋಪಿಯು ಯಾವಾಗ ನನ್ನ ಬಳಿ ಹಣ ಕೇಳಿರುತ್ತಾರೆಂದು ನನ್ನ ದೂರಿನಲ್ಲಿ ಬರೆದಿರುವ ಬಗ್ಗೆ ಗೊತ್ತಿಲ್ಲ. ಆರೋಪಿಯು 2017-18 ರಿಂದ ನನ್ನ ಬಳಿ ಹಣ ಪಡೆದಿರುತ್ತಾರೆ. 2017 ರ 6 ನೇ ತಿಂಗಳಿನಲ್ಲಿ ಹಣವನ್ನು ನೀಡಿರುತ್ತೇನೆ. ಆರೋಪಿಯು 2-3 ತಿಂಗಳಲ್ಲಿ ಹಣವನ್ನು ಹಿಂದಿರುಗಿಸುತ್ತೇನೆಂದು ಹೇಳಿರುತ್ತಾನೆ. ಆರೋಪಿಯು ಹಣವನ್ನು ನನ್ನ ಬಳಿ ಪಡೆದಾಗ ಯಾವುದೇ ಬದ್ರತೆ ಗೆಂದು ದಾಖಲೆ ಮತ್ತು ಚೆಕ್ ನ್ನು ನೀಡಿರುವುದಿಲ್ಲ. ಹಣವನ್ನು 4-5 ತಿಂಗಳಿನಲ್ಲಿ ಹಿಂದಿರುಗಿಸುತ್ತೇನೆಂದು ತಿಳಿಸಿರುತ್ತಾನೆ. ದೂರಿನಲ್ಲಿ ಅದನು ತಿಳಿಸಿರುವ ವಿಷಯ ಗೊತ್ತಿಲ್ಲ. ನಗದಿಕರಣಕ್ಕೆ ಸಲ್ಲಿಸಿದಾಗ ಸಾಕಷ್ಟು ಹಣ ಇಲ್ಲ ಎಂದು ಹಿಂದಿರುಗಿ ಬಂದಿರುತ್ತದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೆನೆ.

ನಿಪಿ 1 ಅನ್ನು ಒಂದೇ ಬಾರಿ ನಗದಿಕರಣಕ್ಕೆ 13 ನೇ ತಾರಿಕಿನಂದು ಸಲ್ಲಿಸಿರುತ್ತೇನೆ. ಅದು 24 ನೇ ತಾರಿಕಿನಲ್ಲಿ ಹಿಂದಿರುಗಿ ಬಂದಿರುತದೆ. ನಗದೀಕರಣಕ್ಕೆ ಸಲ್ಲಿಸಿದ ನಂತರ ಆರೋಪಿಯನ್ನು ಪುನಃ ಬೇಟಿಯಾಗಿಲ್ಲ. ಬ್ಯಾಂಕಿನಿಂದ ಹಿಂಬರಹದಲ್ಲಿ ಬರೆದಿರುವ ವಿಷಯವನ್ನು ಒದಿ ತಿಳಿದುಕೊಂಡಿರುತ್ತೇನೆ. ಬ್ಯಾಂಕಿನಿಂದ ಬಂದ ಹಿಂಬರಹದಲ್ಲಿ Kindly contact drawer drawee bank and please present again ಎಂದು ನಮೂದು ಇರುವ ಬಗ್ಗೆ ತಿಳಿದಿರುತ್ತದೆಂದರೆ ಹೌದು ಎಂದು ಹೇಳುತ್ತಾರೆ. ಆ ರೀತಿ ಹೇಳಿರುತ್ತಾರೆಂದು ನನ್ನ ದೂರಿನಲ್ಲಿ ತಿಳಿಸಿರುತ್ತೇನೆ. ನಿಪಿ 1 ಸಾಕಷ್ಟು ಹಣ ಇಲ್ಲದೇ ಹಿಂದಿರುಗಿ ಬಂದಿರುವುದಿಲ್ಲ ಎಂದರೆ ಅದಕ್ಕೆ ಪೂರಕ ದಾಖಲೆಗಳನ್ನು ನೀಡಿರುವುದಿಲ್ಲ. 2016-17 ರಲ್ಲಿ 500 ಹಾಗೂ 1000 ರೂ. ಮುಖಬೆಲೆಯ ನೋಟುಗಳ ಮೇಲೆ ನಿರ್ಬಂದ ಹಾಕಲಾಗಿದೆ ಎಂದರೆ ಸರಿ. 2017 ರಲ್ಲಿ ಬ್ಯಾಂಕಿನಿಂದ ಹೊಸ ನೋಟುಗಳನ್ನು 50 ಸಾವಿರ ಮತ್ತು 20 ಸಾವಿರಗಳಂತೆ ಪಡೆದಿರುತ್ತೇನೆ.

2017-18 ರಲ್ಲಿ ಆರೋಪಿಗೆ ಚೆಕ್ ಮುಖಾಂತರ ಹಣ ನೀಡಿರುತ್ತೇನೆ. 2019 ರಲ್ಲಿ ಆರೋಪಿಯು ಮನೆಯನ್ನು ಬರೆದು ಕೊಡುವ ಸಮಯಕ್ಕೆ ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. ಸದರಿ ಕರಾರು ಪತ್ರವನ್ನು ಹಣವನ್ನು ಹಿಂದಿರುಗಿಸುವವರಗೂ ನಿಮ್ಮ ಹೆಸರಿಗೆ ಮಾಡಿ ಕೊಟ್ಟಿರುತ್ತೇನೆ. ಆ ರೀತಿ ಪತ್ರವಾದ ದಿನ ಯಾವುದೇ ಹಣವನ್ನು ಆರೋಪಿಗೆ ನೀಡಿರುವುದಿಲ್ಲ ಎಂದರೆ ಆರೋಪಿಯು ನನ್ನ ಬಳಿ 2 ಲಕ್ಷ ರೂ. ಪಡೆದಿರುತ್ತಾನೆಂದು ಉತ್ತರಿಸುತ್ತಾರೆ. ಹಣದ ಬಾಬತ್ತಿಗೆಂದು ಆ ರೀತಿಯ ಕರಾರು ಪತ್ರವನ್ನು ಮಾಡಿಸಿಕೊಂಡಿರುತ್ತೇನೆಂದು ನನ್ನ ದೂರಿನಲ್ಲಿ ತಿಳಿಸಿರುವುದಿಲ್ಲ.

ಆರೋಪಿಯು ನಿಪಿ 1 ಅನ್ನು 05-11-2023 ರಂದು ನೀಡಿರುತ್ತಾರೆ. ಸದರಿ ವಿಷಯವನ್ನು ದೂರಿನಲ್ಲಿ ತಿಳಿಸಿರುತ್ತೇನೆ. ಆ ರೀತಿ ದೂರಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ರಲ್ಲಿರುವ ಎಲ್ಲಾ ಬರವಣಿಗೆಯು ಆರೋಪಿಯದ್ದೇ ಆಗಿರುತ್ತದೆ. ಆ ರೀತಿ ಯಾವುದೇ ಬರವಣಿಗೆ ಬರೆದಿರುವುದಿಲ್ಲ ನಾನೇ ಸುಳ್ಳು ಸೃಷ್ಟಿಸಿಕೊಂಡಿರುತ್ತೇನೆಂದರೆ

ಸರಿಯಲ್ಲ. ನಿಪಿ 1 ರ ಬರವಣಿಗೆಯನ್ನು ಪರಿಶೀಲನೆ ಮಾಡಿಸಲು ತಜ್ಞರ ಬಳಿ ಕಳಿಸಲು ತೊಂದರೆ ಇಲ್ಲ. ನಿಪಿ 1 ರಲ್ಲಿರುವ ಬರವಣಿಗೆಯು ಆರೋಪಿಯದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿಯು ಮನೆ ಕಟ್ಟುವ ಮೇಸ್ತ್ರಿ ಆಗಿರುತ್ತಾರೆ. ಮನೆ ಕಟ್ಟುವ ಕೆಲಸ ಮಾಡಲು ಆರೋಪಿ ಪರವಾನಿಗೆ ಪಡೆದ ಬಗ್ಗೆ ಗೊತ್ತಿಲ್ಲ. ಆರೋಪಿಗೆ 100 ಹಾಗೂ 500 ಮುಖಬೆಲೆ ನೋಟು ನೀಡಿರುತ್ತೇನೆ. ಆರೋಪಿಯು ಮೊದಲು 2,50,000/- ಪಡೆದಿರುತ್ತಾರೆ. ಹಣವನ್ನು ಹಿಂದಿರುಗಿಸಲು ಕೇಳಿಕೊಂಡಿಕಾಗ ಆರೋಪಿಯು ಮನೆಯನ್ನು ಮಾರಾಟ ಮಾಡಲು ಮುಂದೆ ಬಂದಿರುತ್ತಾರೆ ಆ ಸಮಯಕ್ಕೆ ಆರೋಪಿಗೆ 2 ಲಕ್ಷ ಹಣವನ್ನು ನೀಡಿರುತ್ತೇನೆ. ಸದರಿ ಕರಾರು ಪತ್ರವನ್ನು ನೊಂದಣಿ ಮಾಡಿಸುವ ಸಮಯಕ್ಕೆ 2 ಲಕ್ಷ ನೀಡಿರುತ್ತೇನೆ. ಒಟ್ಟು 6,50,000/- ರೂ. ನೀಡಿರುತ್ತೇನೆ. ಮೊದಲನೇ ಬಾರಿ 2017 ರಲ್ಲಿ ಕೊಟ್ಟಿರುತ್ತೇನೆ. 2 ನೇ ಬಾರಿ 2018 ರಲ್ಲಿ ಹಾಗೂ ಕೊನೆಯದಾಗಿ 2019 ರಲ್ಲಿ ಕೊಟ್ಟಿರುತ್ತೇನೆ. ಈ ಎಲ್ಲಾ ವಿಷಯಗಳನ್ನು ನನ್ನ ದೂರಿನಲ್ಲಿ ತಿಳಿಸಿರುತ್ತೇನೆ.

ಸದರಿ ಕರಾರು ಪತ್ರವನ್ನು ಆರೋಪಿಯು ನನ್ನ ಹೆಸರಿಗೆ ಮಾಡಿಕೊಟ್ಟಿರುವ ಕಾರಣ ಒಂದು ವೇಳೆ ನಾನು ಪಡೆದ ಸಾಲವನ್ನು ಹಿಂದಿರುಗಿಸಲು ಆಗದೇ ಇದ್ದಲ್ಲಿ ಮನೆಯನ್ನು ನಿಮ್ಮ ಹೆಸರಿಗೆ ಮಾಡಿಕೊಡುತ್ತೇನೆ ಒಂದು ವೇಳೆ ಸಾಲವನ್ನು ತೀರಿಸಲು ಹಣ ಸೇರಿದರೆ ಸಾಲವನ್ನು ತೀರಿಸಿ ಮನೆಯನ್ನು ನನ್ನ ಹೆಸರಿಗೆ ಪುನಃ ಬರೆಸಿಕೊಳ್ಳುತೇನೆ.

ಹಣವನ್ನು ನೀಡುವ ಸಮಯದಲ್ಲಿ ನನ್ನ ಹೆಂಡತಿಯನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ ಆರೋಪಿಗೆ ಹಣವನ್ನು ಅವರ ಮನೆಯಲ್ಲಿ ನೀಡಿರುತ್ತೇನೆ. ಆಗ ಅವರ ಮನೆಯಲ್ಲಿ ಎಲ್ಲರೂ ಹಾಜರಿದ್ದರು. ಯಾವುದೇ ಹಣವನ್ನು ಕೊಡದೇ ಇದ್ದರು ಕೊಟ್ಟಿರುತ್ತೇನೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ಕರಾರು ಪತ್ರಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಕರಣ ಅಥವಾ ದಾವೆಯನ್ನು ಹೂಡಿರುವುದಿಲ್ಲ ಕಾರಣ ಆರೋಪಿಯು ಮನೆಯನ್ನು ಬಿಡಿಸಿಕೊಳ್ಳುತ್ತೇನೆಂದು ತಿಳಿಸಿರುತ್ತಾನೆ.

ನಿಪಿ 3 ಅನ್ನು ಚೆಕ್ ಅಮಾನ್ಯ ಗೊಂಡ ನಂತರ ನವೆಂಬರ್ ತಿಂಗಳಿನಲ್ಲಿ ಕಳಿಸಿರುತ್ತೇನೆ ದಿ 24 ಅಥವಾ 26 ಆಗಿರಬಹುದು. 3 ಬಾರಿ ಕಾನೂನು ನೋಟೀಸ್ ಅನ್ನು ಕಳುಹಿಸಿರುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**